ಅವನ ಹಣೆಗೆ ಮುತ್ತು ಕೊಟ್ಟಳಂತೆ. ನಾಗಣ್ಣನಿಂದ ಇಂತಹ ತೀಕ್ಷ್ಣ ಪ್ರತಿಕ್ರಿಯೆ ನಿರೀಕ್ಷಿಸಿರದಿದ್ದ ಸಿದ್ದಣ್ಣ ಒಮ್ಮೆಲೆ ತತ್ತರಿಸಿದ. ಇಬ್ಬರೂ ಹೊಡೆದಾಡುವ ಮುನ್ನ ಅಲ್ಲಿದ್ದವರು ದೂರ ಸರಿಸಿದರು. ಅಲ್ಲಿಂದ ಹೆಜ್ಜೆ ಕೀಳುವ ಮುನ್ನ ನಾಗಣ್ಣ ಅವನಿಗೆ ಎಚ್ಚರಿಕೆ ಕೊಟ್ಟನಂತೆ.

'ಏಯ್ ಸಿದ್ದು, ನೀನು ಆಕೀ ಮೈದುನ ಮತ್ತು ಹಿಂದಿನ ಅಧ್ಯಕ್ಷ ಅನ್ನೋದಕ್ಕ ಸುಮ್ಮನ ಬಿಡಾಕ ಹತ್ತೇನಿ. ಮಾಯಕ್ಕ ನಿನಗ ತಾಯಿ ಸಮಾನ ಹೌದೋ, ಅಲ್ಲೋ ನಿನಗ ಬಿಟ್ಟದ್ದು. ಆದರೆ ಮಾಯಕ್ಕ ನನಗ ಸ್ವಂತ ಅಕ್ಕನಿಗಿಂತಲೂ ಹೆಚ್ಚು. ನನಗಷ್ಟೆ ಅಲ್ಲ. ಬಾಳ ಮಂದಿಗೆ ಅವ್ವನ ವಾತ್ಸಲ್ಯ ತೋರಿಸಿದಾರು. ಎಷ್ಟೋ ಬಡವರನ್ನ ಉದ್ಧಾರ ಮಾಡ್ಯಾರು. ಅವರಿಗೆ ಕಳಂಕ ಬರುವಂಗ ಮಾತಾಡೀದಿಯಂದ್ರ ನಿನ್ನ ಇಲ್ಲೆ ಊರು ಅಗಸಿಯೊಳಗ ಹುಗದಬಿಡ್ತೇನಿ. ಹುಷಾರದಿಂದ ಇರು.'

ಮೊದಲ ಬಾರಿ ಸಿದ್ದಣ್ಣನಿಗೆ ಜೀವನದಲ್ಲಿ ಪೆಟ್ಟು ಬಿದ್ದಿತ್ತು. ಇದುವರೆಗೆ ಯಾರೂ ಅವನನ್ನು ತಡವಿರಲಿಲ್ಲ. ಅವರಿಬ್ಬರೂ ಒಳ್ಳೆಯ ಗೆಳೆಯರಾಗಿದ್ದರು. ಆದರೆ ಒಮ್ಮಿಂದೊಮ್ಮೆಲೆ ವೈರಿಗಳಾಗಿ ಮಾರ್ಪಾಟಾಗಿದ್ದರು. ತಾನು ಈ ನಾಗಣ್ಣನಿಗೆ ಎಷ್ಟೆಲ್ಲ ಹಣದ ಸಹಾಯ ಮಾಡಿದ್ದೆ. ಮಾಯಕ್ಕಳಿಗೆ ಸಂಬಂಧಪಟ್ಟ ಸಂಗತಿಗಳನ್ನು ಅವನಿಂದ ಗುಪ್ತವಾಗಿ ತೆಗೆದುಕೊಳ್ಳಬೇಕೆಂದು ಬಯಸಿದ್ದೆ. ಆದರೆ ಅವನು ಚಾಲಾಕ. 'ತಾನೀಗಾಗಲೇ ಮಾಯಕ್ಕಳ ಪರವಾಗಿ ಕೆಲಸ ಮಾಡುವೆನೆಂದು ವಾಗ್ದಾನ ಕೊಟ್ಟಿದ್ದೇನೆ. ಆ ವಚನವನ್ನು ಮುರಿಯಲಾರೆ' ಎಂದಿದ್ದ. ಗೂಳಿ ಬಿದ್ದಾಗ ಆಳಿಗೊಂದು ಕಲ್ಲು ಎನ್ನುವಂತೆ ನಾಗಣ್ಣನಿಂದ ಅಪಮಾನಕ್ಕೆ ಒಳಪಡಬೇಕಾಯಿತಲ್ಲ. ಸಾರ್ವಜನಿಕರೆದುರು ತನ್ನ ಗೌರವ ಮಣ್ಣುಪಾಲಾಯಿತು.

ಹೋಗಲಿ ಬಿಡಿ, ಇದು ಒಂದು ರೀತಿ ಒಳ್ಳೆಯದೇ ಆಯಿತು. ಮಾಯಕ್ಕನ ಪರವಾಗಿ ಈತ ಏರಿ ಬರುತ್ತಾನೆಂದರೆ ಮಾಯಕ್ಕನಿಗೂ ಇವನಿಗೂ ಏನಾದರೂ ಸಂಬಂಧವಿದೆಯೆಂದು ಮಂದಿ ತಿಳಿಯುತ್ತಾರೆ. ಆವಾಗಲಾದರೂ ಅವನಿಗೆ ಮತ್ತು ಆಕೆಗೆ ಬುದ್ಧಿ ಬರಬಹುದು. ನಾಗಣ್ಣ ಸುಖಾಸುಮ್ಮನೆ ತನ್ನ ಹೆಸರನ್ನು ಹಾಳು ಮಾಡುತ್ತಿದ್ದಾನೆಂದು ಹೆದರಬಹುದು. ಆದರೆ ಹಾಗೆಲ್ಲ ಆಕೆ ಹೆದರುವವಳಲ್ಲವೆಂಬುದು ಸಿದ್ದಣ್ಣನಿಗೆ ಗೊತ್ತು. ಆಕೆ ಬಹಳ ಗಟ್ಟಿಗಿತ್ತಿ. ಹೆದರುವ ಹಾಗಿದ್ದರೆ ಹತ್ತು ವರ್ಷದ ಹಿಂದೆಯೇ ನಾಗಣ್ಣ ಯಾಕೆ ತಮ್ಮ ಮನೆಗೆ ನೀರು ತಂದು ಹಾಕುತಿದ್ದ. ಅಡುಗೆ ಮನೆಯ ದೊಡ್ಡ ಹಂಡೆಯನ್ನು, ಹಿತ್ತಲಿನ ಬ್ಯಾರಲ್ ಅನ್ನು, ದನಕರುಗಳಗಳಿಗೆಂದು ದೊಡ್ಡ ಸಿಮೆಂಟಿನ ತೊಟ್ಟಿಯನ್ನು ತುಂಬಿಸುತ್ತಿದ್ದ. ಶಿವಣ್ಣ ಮತ್ತು ನಾಗಣ್ಣ ಇಬ್ಬರೂ ಗೆಳೆಯರು. ಶಿವಣ್ಣ ತನ್ನ ಕೆಲಸ ಹಗುರ ಮಾಡಿಕೊಳ್ಳಬೇಕೆಂದು ಇವನಿಗೆ ಕೆಲಸ ಹಚ್ಚುತ್ತಿದ್ದ. ಅವ್ವನಿಗೆ ನಾಗಣ್ಣ ಮನೆಗೆ ಬರುವುದು ಇಷ್ಟವಿರಲಿಲ್ಲ.

ಮಾಯಕ್ಕನ ಆಟವನ್ನು ತಾನು ನೋಡಿಲ್ಲವೆ? ಯಾರ್ಯಾರನ್ನೋ ಸಹಾಯದ ನೆಪದಲ್ಲಿ ಮನೆಗೆ ಕಳಿಸಿ ಮಾಹಿತಿ ತಿಳಿಯುತ್ತಾಳೆ. ಅವ್ವ ಅನುಮಾನದ ಹುತ್ತದಿಂದ ಒಂದೊಂದೆ ಹಾವು ಬಿಡುತ್ತಿದ್ದಳು. ಈ ನಾಗಣ್ಣ ಮಾಯಕ್ಕಳ ಜೊತೆ ಎಲ್ಲಿ ಬೇಕಾದಲ್ಲಿ ಮಾತಾಡುತ್ತ ನಿಂತಿರುತ್ತಾನೆ, ಬಾವಿಕಟ್ಟೆಯ ಮೇಲೆ ಒಬ್ಬರಿಗೊಬ್ಬರು ನೀರಿನ ಕೊಡ ಹೊರಿಸುತ್ತಾರೆ, ಆಕೆ ಇವನಿಗೆ ಹೊಟೇಲಿನಿಂದ ಬೇಕಾದ್ದು ಬೇಡಾದ್ದು ತಂದುಕೊಡುತ್ತಾಳೆ. ಇಂತಹವನು ತಮ್ಮ ಮನೆಗೆ ನೀರು ತರುವುದೂ ಬೇಡ, ಇವನಿಂದ ಶಿವಣ್ಣ ಮಾಯಕ್ಕನಿಗೆ ಮತ್ತಷ್ಟು ಹತ್ತಿರವಾಗುವುದೂ ಬೇಡ. ಮೊದಲು ತನ್ನ ಮಗ ಶಿವಣ್ಣನಿಗೆ ಬುದ್ಧಿಯಿಲ್ಲ. ಹೋಗಿ ಹೋಗಿ ಅವಳ ಹಿಂದೆ ಬಿದ್ದಿದ್ದಾನೆ. ಮಾಯಿ ನೋಡಿದರೆ ನಾಗಣ್ಣನ ಹಿಂದೆ ಬಿದ್ದಿದ್ದಾಳೆ! ತನಗಿಂತ ಇಪ್ಪತ್ತು ವರ್ಷದ ಸಣ್ಣವನ ತಲೆ ಕೆಡಿಸಿದ್ದಾಳೆ. ಆಕೆ ಹೇಳಿದರೆ ಮತ್ತೊಬ್ಬರ ತಲೆ ಕಡಿಯಲು ಸಹ ಅವನು ತಯಾರು. ಇನ್ನಷ್ಟು ದಿನಕ್ಕೆ ಎಲ್ಲರೂ ಹಾಳಾಗಿ ಹೋಗುವವರು. ಆದರೆ ಅವ್ವ ಹೇಳಿದಂತೆ ಒಂದೂ ನಡೆಯಲಿಲ್ಲವೆಂದು ಸಿದ್ದಣ್ಣ ನಿಟ್ಟುಸಿರು ಬಿಡುವನು. ಆತ ಮನೆಗೆ ನೀರು ತಂದು ಹಾಕಲಿ, ಬಿಡಲಿ. ನಾಗಣ್ಣ ಅವಳ ಭಂಟನಾಗಿಯೇ ಇದ್ದಾನೆ. ಅವಳು ಹೇಳಿದ ಕೆಲಸಗಳನ್ನು ಚಾಚೂ ತಪ್ಪದೆ ಮಾಡುತ್ತಾನೆ.

ಮೊದಲು ಬರೀ ಮಾಯಕ್ಕಳಿಗೆ ಬೇಕಾಗಿದ್ದ. ಈಗ ನೋಡಿದರೆ ಶಿವಣ್ಣನಿಗೂ ನಾಗಣ್ಣ ಅಚ್ಚುಮೆಚ್ಚು. ಶಿವಣ್ಣ, ನಾಗಣ್ಣ, ದುಂಡಪ್ಪಕಾಕಾ, ದೇವಪ್ಪ ಹಾಗೂ ಮಾಯಕ್ಕ ಮತ್ತು ತನ್ನ ಅವ್ವ ಯಲ್ಲವ್ವ ಇವರೆಲ್ಲರೂ ಒಂದು ಗುಂಪು ಆಗಿದ್ದಾರೆ. ಮೊದಮೊದಲ ಮಾಯಕ್ಕಳ ಸಲುವಾಗಿ ದೇವಪ್ಪ ಮತ್ತು ತನ್ನ ಅಣ್ಣ ಶಿವಣ್ಣನ ನಡುವೆ ದೊಡ್ಡ ಜಗಳಗಳಾಗುತ್ತಿದ್ದವು. ಈಗ ನೋಡಿದರೆ ಬೆಲ್ಲ ಕಡಿದುಕೊಂಡು ತಿಂದಂತೆ ಒಬ್ಬರನ್ನೊಬ್ಬರು ಪ್ರೀತಿಯಿಂದ ತಿನ್ನುತ್ತಾರೆ! ದೇವಪ್ಪನಿಗೆ ಸ್ವಲ್ಪಾದರೂ ನಾಚಿಕೆ ಬೇಡವೆ? ತನ್ನ ಹೆಂಡತಿಯಾಗಿದ್ದವಳು ಬೇರೊಬ್ಬರ ಹೆಂಡತಿಯಾಗಿದ್ದಾಳೆ. ಅವನಿಗೆ ಸ್ವಲ್ಪವೂ ಮುಜುಗರ ಎನಿಸುವುದಿಲ್ಲವೆ? ಅವ್ವ ಅದನ್ನೇ ಹೇಳುತ್ತಿದ್ದಳು.

'ನೋಡುತ್ತಾ ಇರಿ, ಮಾಯಕ್ಕ ಒಬ್ಬೊಬ್ಬರನ್ನೆ ಮುಗಿಸುತ್ತ ಬರುತ್ತಾಳೆ' ಕೊನೆಗೆ ಮಾಯಕ್ಕ ತನ್ನ ಅಸ್ತಿತ್ವಕ್ಕೆ ಧಕ್ಕೆ ತರಬಹುದೆಂದು ತಾನೆಂದೂ ಯೋಚಿಸಲೆ ಇಲ್ಲ. ಈಗ ತುಂಬ ತಡವಾಗಿದೆ. ಏನೂ ಮಾಡಲು ಸಾಧ್ಯವಿಲ್ಲ. ತನ್ನ ಹೆಂಡತಿ ವಿಮಲವ್ವನೂ ತನಗೆ ಮೋಸ ಮಾಡುವಂತಾದಳೆ? ವಿಮಲಾಳ ಗುಣಸ್ವಭಾವಗಳು ತನಗೆ ತಿಳಿಯದೆ ಹೋದವೆ? ಆಕೆಯನ್ನು ತಾನು ಎಷ್ಟೆಲ್ಲ ನಂಬಿದ್ದೆನಲ್ಲ? ಮೋಸ ಮಾಡುವವರು ಜೀವನದಲ್ಲಿ ಹೇಗೆಲ್ಲ ಬಂದು ಸೇರಿಕೊಳ್ಳುತ್ತಾರೆ. ತಮಗೆ ಗೊತ್ತೇ ಆಗುವುದಿಲ್ಲ. ತಾನು ಒಬ್ಬಂಟಿಯಾದೆನಲ್ಲ? ತಾನು ಪಂಚಾಯಿತಿ ಅಧ್ಯಕ್ಷನಾಗಿರುವ ಸಮಯದಲ್ಲಿ ತನ್ನೊಂದಿಗೆ ಹತ್ತಾರು ಮಂದಿ ಇರುತ್ತಿದ್ದರು. ಅವರೆಲ್ಲ ಈಗ ಎಲ್ಲಿ ಹೋದರು? ಮಾಯಕ್ಕಳ ಬದ್ಧ ವೈರಿಯಾಗಿದ್ದ ಅವ್ವನೂ ಮಾಯಕ್ಕಳ ಪರ ವಹಿಸಿಕೊಂಡು ಮಾತಾಡುತ್ತಾಳೆ. ಹಿಂದೆ ಶಿವಣ್ಣನನ್ನು ದೂರ ಮಾಡಿ ತಪ್ಪು ಮಾಡಿದೆ ಎನ್ನುತ್ತಾಳೆ. ಮಾಯಕ್ಕ ತನ್ನ ಪ್ರೀತಿಯ ಸೊಸೆಯೆಂದು ಮುದ್ದು ಮಾಡುತ್ತಾಳೆ! ಅಂತಹ ಸೊಸೆ ಪಡೆಯಲು ಪುಣ್ಯ ಮಾಡಿ ಬಂದಿರಬೇಕು ಎನ್ನುತ್ತಾಳೆ. ಏನಾಯಿತು ಇವರೆಲ್ಲರಿಗೆ? ಅದೃಷ್ಟವೆನ್ನುವುದು ಯಾಕೆ ತನ್ನ ಕೈಬಿಟ್ಟು ಹೋಯಿತು? ತಾನು ಅವ್ವನ ಪ್ರೀತಿಯ ಮಗನಾಗಿದ್ದೆ. ಅವಳ ಮಾತನ್ನು ಶಿರಸಾವಹಿಸಿ ಪಾಲಿಸಿದೆ. ಆದರೆ ಕೊನೆಗೆ ತಾಯಿ ಸಹ ತನ್ನನ್ನು ತಿರಸ್ಕರಿಸಿದಳು.

'ಸಿದ್ದಣ್ಣ, ನೀನು ಇಷ್ಟು ನೀಚ ಬುದ್ಧಿಯವನು ಅಂತ ಗೊತ್ತಿರಲಿಲ್ಲ. ನಿನ್ನ ಸ್ವಾರ್ಥಕ್ಕ ನೀ ಬೇಕಾದ್ದು ಮಾಡಾಕ ತಯಾರದೀ ಅಂದಂಗಾತು. ನೀನು ಹುಳಾ ಬಿದ್ದು ಹೋಗ್ತಿ.' ತನಗೆ ತಾಯಿಯ ಶಾಪ ತಟ್ಟಿತೆ? ಅಂತಹ ತಪ್ಪನ್ನು ತಾನೇನು ಮಾಡಿದೆ? ತನ್ನನ್ನೆ ಎಲ್ಲರೂ ತುಳಿದರು. ಅಣ್ಣ ತುಳಿದ, ಅತ್ತಿಗೆ ತುಳಿದಳು, ಕೊನೆಗೆ ತಾಯಿಯೂ ತುಳಿದಳು. ಯಲ್ಲವ್ವನ ಪ್ರೀತಿಯ ಮಗ ಸಿದ್ದಣ್ಣನಿಗೆ ಏನೂ ಹೊಳೆಯಲಿಲ್ಲ.

ಕಾಲ ಎಷ್ಟು ಬೇಗ ಬದಲಾಗುತ್ತದೆ. ಇಪ್ಪತ್ತು ಮೂವತ್ತು ವರ್ಷಗಳಲ್ಲಿ ಮಲ್ಲೂರಿನಲ್ಲಿ ಇಷ್ಟೆಲ್ಲ ಬದಲಾವಣೆ ನಡೆಯಬಹುದೆಂದು ಯಾರೂ ಎಣಿಸಿರಲಿಲ್ಲ. ಹೀಗೊಂದು ದಿನ ಹೀಗೆ ಮಾಯಕ್ಕನನ್ನು ಮುಂದಿಟ್ಟುಕೊಂಡು ಕಾರ್ಯಕ್ರಮ ಮಾಡಬಹುದೆಂದು ಯೋಚಿಸುವುದು ಸಹ ಆಗ ಸಾಧ್ಯವಿರಲಿಲ್ಲ. ಆ ಸಮಯದಲ್ಲಿ ಅವಳನ್ನು ಎಲ್ಲರೂ ಬೈಯ್ದುಕೊಂಡು ಅಡ್ಡಾಡುವವರೇ ಆಗಿದ್ದರು. ಜೀವನದ ವೈಚಿತ್ರವೆಂದರೆ ಇದೇ ಅಲ್ಲವೆ? ಯಾರದೇ ಮನೆ ಅಥವಾ ಯಾವುದೇ ಓಣಿಯಲ್ಲಿ ಈಗ ಏನೇ ನಡೆಯುವುದಿದ್ದರೂ ಅವಳನ್ನು ತಪ್ಪದೆ ಆಹ್ವಾನಿಸುತ್ತಾರೆ. ಮಾಯಕ್ಕ ಇದ್ದರೇನೆ ಅದಕ್ಕೊಂದು ಶೋಭೆ ಎಂಬಂತಾಗಿತ್ತು. ಅವಳು ಬರದಿದ್ದರೆ ತಾವು ಕಾರ್ಯಕ್ರಮವನ್ನೆ ಮಾಡುವುದಿಲ್ಲ ಎಂದು ಹೇಳಿ ಅವಳಿಗೆ ಹೊಂದಾಣಿಕೆಯಾಗುವ ದಿನದಂದೇ ಅದನ್ನು ಹಮ್ಮಿಕೊಳ್ಳುವರು. ಅವಳ ಅಭಿಪ್ರಾಯಗಳಿಲ್ಲದೆ ಜಾತ್ರೆಉತ್ಸವಗಳು ನಡೆದಿದ್ದೇ ಇಲ್ಲ. ಯಾರೆ ಕರೆಯಲಿಕ್ಕೆ ಬಂದರೂ ಮಾಯಕನದು ತುಂಬ ಸೌಜನ್ಯದ ಮಾತು. ತಾನು ಪಂಚಾಯತಿಯ ಮುಖ್ಯಸ್ಥಳೆನ್ನುವ ಬಿಗುಮಾನ ತೋರಿಸಿದವಳಲ್ಲ.

ಪಂಚಾಯಿತಿಯಲ್ಲಿಯೂ ಅಷ್ಟೇ. ಏಕಪಕ್ಷೀಯ ನಿರ್ಧಾರ ಎಂದೂ ತೆಗೆದುಕೊಂಡವಳಲ್ಲ. ಏನಿದ್ದರೂ ಎಲ್ಲ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡೆ ಮುಂದಿನ ಹೆಜ್ಜೆ. ಊರಿನ

